63ರ ಪ್ರಕಾರ ರೀ ಆಡಿಟ್ ಮಾಡಬಹುದೆಂದು ಹೈಕೋರ್ಟ್ ಈಗಾಗಲೇ ತೀರ್ಪು ನೀಡಿದೆ. ನಾನು ತಮ್ಮ ಗಮನಕ್ಕೆ ತರುವುದಾದರೆ ಹಾಸನ ಇಂಜಿನಿಯರಿಂಗ್ ಮತ್ತು ಟೆಕ್ನೀಷಿಯನ್ ಸಹಕಾರ ಸಂಘಗಳ ನಿಯಮಿತ ಇದರ 83–84ರಿಂದ 86–87ನೇ ಸಾಲುಗಳವರೆಗಿನ ಲೆಕ್ಕ ಪರಿಶೋಧನೆಯ ನ್ಯೂನತೆಗಳನ್ನು ಸದರೀ ಸಂಘದ ಅಧ್ಯಕ್ಷರು ಇಲಾಖೆಯ ಗಮನಕ್ಕೆ ತಂದು ಇದನ್ನು ಸರಿಪಡಿಸಲು ಕೋರಿದಂತೆ ಹಾಗೂ ಈ ವಿಷಯವು ಅಂದಾಜು ಸಮಿತಿಯ ಸಭೆಯಲ್ಲಿ ಚರ್ಚೆಗೆ ಬಂದಿರುವುದರಿಂದ ಸದರೀ ಸಂಘದ 83–84ರಿಂದ 86–87ನೇ ಸಾಲಿನ ಲೆಕ್ಕಗಳನ್ನು ಮರುಪರಿಶೀಲನೆಗೆ ಅಳವಡಿಸಿದುದು ಸದರೀ ಮರುಪರಿಶೀಲನೆಯಲ್ಲಿ ಕಂಡುಬಂದ ವ್ಯತ್ಯಾಸಗಳನ್ನು ಬಿಡುಗಡೆ ಮಾಡಲಾಗಿರುವ 89–90ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಅಳವಡಿಸಿರುವುದರಿಂದ ಇದರ ಬಿಡುಗಡೆಗೆ ಸೂಕ್ತ ವ್ಯವಸ್ಥೆ ಮಾಡಲಾಗಿದೆ. ಈಗ ಈ ವಿವರಗಳು ನನ್ನ ಹತ್ತಿರ ಇಲ್ಲ, ನಾನು ತರಿಸಿ ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆಂದು ಹೇಳಬಯಸುತ್ತೇನೆ.

ಶಿವಮೊಗ್ಗದಲ್ಲಿನ ಕೃಷಿ ಮಹಾವಿದ್ಯಾಲಯ

419. ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಶಿವಮೊಗ್ಗಯಲ್ಲಿ ಕೃಷಿ ಕಾಲೇಜು ಆರಂಭವಾಗಿದ್ದು, ಅದಕ್ಕೆ ಸ್ವಂತ ಭೂಮಿಯಾಗಲಿ, ಕಟ್ಟಡವಾಗಲಿ ಅಧ್ಯಾಪಕರಾಗಲಿ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಬಂದಿದ್ದಲ್ಲಿ, ಕೃಷಿ ಕಾಲೇಜು ಅಭಿವೃದ್ಧಿಗೆ ಸರ್ಕಾರವು ಸೂಕ್ತ ಕ್ರಮ ಕೈಗೊಳ್ಳುವುದೇ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕೃಷಿ ಸಚಿವರು):–

ಅ) ಹೌದು.

ಆ) ಕ್ರಮ ಕೈಗೊಳ್ಳಲಾಗುತ್ತಿದೆ.

ಉಪಾಧ್ಯಕ್ಷಿಣಿಯವರು:– ಇನ್ನು 10 ನಿಮಿಷ ಮಾತ್ರ ಇದೆ. ಯಾರು ಪ್ರಶ್ನೆ ಹಾಕಿದ್ದಾರೆ ಅವರಿಗೆ ಮಾತ್ರ ಸಪ್ಲಿಮೆಂಟರಿ ಕೇಳುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ ಇಲ್ಲವಾದಲ್ಲಿ ಎಲ್ಲವನ್ನೂ ಲ್ಯಾಪ್ಸ್ ಮಾಡುತ್ತೇನೆ. ತಾವೆಲ್ಲರೂ ಕೋ ಆಪರೇಟ್ ಮಾಡಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ:– ಯಾವ ರೀತಿ ಮಾನ್ಯ ಕೃಷಿ ಮಂತ್ರಿಗಳು ನಿಧಾನ ಉತ್ತರ ಕೊಡುತ್ತಿದ್ದಾರೆ ಅದೇ ರೀತಿ ಶಿವಮೊಗ್ಗ ಜಿಲ್ಲೆಯಿಂದ ಬಂದಿರುವ ನನ್ನ ಸ್ಥಿತಿ ಕೂಡ ಇದೆ. ಸ್ವಾತಂತ್ರ್ಯ ಬಂದಾಗಿನಿಂದ ಇವತ್ತಿನವರೆಗೂ ಇಡೀ ರಾಜ್ಯದ ರಾಜಕೀಯ ಇತಿಹಾಸವನ್ನು ಬದಲಾವಣೆ ಮಾಡುವಂತಹ ಪ್ರಮುಖ ಮಂತ್ರಿಗಳೇ ನಮ್ಮ ಜಿಲ್ಲೆಯವರು ಇದ್ದರು ಅಥವಾ ಜೆ.ಹೆಚ್. ಪಟೇಲ್ ಇರಬಹುದು ಮಾಧವರಾಯರು ಇರಬಹುದು ಇಲ್ಲವೇ ಮೊನ್ನೆ ತನಕ ಮುಖ್ಯಮಂತ್ರಿಗಳಾಗಿದ್ದಂತಹ ಬಂಗಾರಪ್ಪನವರು ಇರಬಹುದು ಒಂದೇ ಒಂದು ಅಭಿವೃದ್ಧಿ ಕಾರ್ಯ ಆಗಿಲ್ಲ. ಮಾನ್ಯ ಬಂಗಾರಪ್ಪನವರು ಮುಖ್ಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ .....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ:– ಇದು ಸರಿಯಲ್ಲ ಜೆ.ಹೆಚ್. ಪಟೇಲ್‌ರವರು ಇದ್ದಾಗ ಅಭಿವೃದ್ಧಿ ಆಗಲಿಲ್ಲವೆಂದು ಹೇಳುವುದು ಸರಿಯಲ್ಲ. He is not a member of the House. He cannot take his name.